ಕಡೂರು ಡಿಸ್ಟ್ರಿಕ್ಟು.

ತಾರೀಖು 15ನೇ ಜನವರೀ 1885.

ಇದರಿಂದ ಸರ್ವರಿಗೆ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಕಾರ್ಮಾದುರ್ಗಕ್ಕೆ ಸೇರಿದ 180 ಯಕರೆ ವಿಸ್ತೀರ್ಣವುಳ್ಳ ಪೂರಾ 6ನೇ ಸರ್ವೇ ನಂಬರ್ ಬೀಳು ಜಮೀನಿಗೆ ಕಾಫಿ ಸಾಗುವಳೀ ಬಗ್ಗೆ ದರಖಾಸ್ತು ಬಂದಿರುವದರಿಂದ ಸದರೀ ಜಮೀನು 1885ನೇ ಇಸವಿ ಫಿಬ್ರವರೀ 20ನೇ ತಾರೀಖಿನಲ್ಲಿ ತರೀಕೆರೆ ತಾಲ್ಲೂಕು ಅಮಲ್ದಾರ್ರು ಕೂಬರೂ ತರೀಕೆರೆ ಮೊಕ್ತಾಮಿನಲ್ಲಿ ಐಯಿಂದ ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯ ತೆರುವದಕ್ಕೂ, ಯಾವದಾವದೂ ನೀರು ಪೈಸಿಕೊಳ್ಳುವದರ ಮತ್ತು ಆವಶ್ಯಕವಾದ ಯಾವದಾವದೂ ಮಾರ್ಗದ ಹಕ್ಕುದಾರಿಗೂ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಕ್ರಯದಾರನು ಹರಾಜು ಬೈವಾದ ಕೂಡ್ಲೇ ಕ್ರಯದ ಮೊಬಲಗ ಪೈಕೀ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು. ಬಾಕಿ ಕ್ರಯದ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತೀ ಮಾಡದೆ ಯಿದ್ದಲ್ಲಿ ಮೊದಲು ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಹಾಗೆ ಡಿಪಾಜಿಟ್ ಯಿಡಲ್ಪಡದೆ ಹೋದರೆ ಯಾ ಕ್ರಯದ ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಪುನಹಾ ದರಾಪ್ ಹಾಕಲ್ಪಡುವದು.

4. ಜಮೀನಿನ ಹರಾಜು ಡೆಪ್ಯುಟೆ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ಪರಿಯಂತ ಅಟ್ಕೈರಾದ್ದಾಗಿನತಕ್ಕದ್ದಲ್ಲವು.

5. ಸದರೀ ಜಮೀನಿನ ಚಕ್ಕುಬಂದಿಯು ಇದರ ಕೆಳಗೆ ಕಾಣಿಸಿರುತ್ತೆ; ಇನ್ನೂ ಜಾಸ್ತಿ ತಪಸೀಲ್‌ಗಳು ಹರಾಜ್ ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೇಜನರಿ ವಿಷಯದಲ್ಲಾಗಲಿ ಯಿರುವ ಗಲ್ಲತಿಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಸರ್ವೇ ನಂಬರ್ 21	ಪೂರ್ವಕ್ಕೆ—ಸಂತವೇರಿಯಿಂದಬಿಕ್ಕ ಮಗಳೂರಿಗೆ ಹೋಗುವ ರಸ್ತೆ
ದಕ್ಷಿಣಕ್ಕೆ—ಅತ್ತಿಗೆರೆ ಗ್ರಾಮದ ಜಮೀನು	ಪಶ್ಚಿಮಕ್ಕೆ—ಸರ್ವೇ ನಂಬರ್ 5

ಮಹಮ್ಮದ್ ಅಲ್ಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆಪ್ಯುಟೆ ಕಮ್ಮಿಷನರ್.

ಸ॥ 1884ನೇ ಇಸವಿ ಡಿಸೆಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಶಿವಮೊಗ್ಗ ಡಿಸ್ಟ್ರಿಕ್ಟು.

ಮಳೆ—ಈ ಮಾಹೆಯಲ್ಲಿ ಮಳೆ ಇವರದೀ ಕಂಪುತಿ ಆಯಿಯುಳ್ಳಟ್ಟಿದೆ.

		ಇಂ.	ಸೆಂ.			ಇಂ.	ಸೆಂ.
ಶಿವಮೊಗ್ಗ	..	0	40	ಸಾಗರ	..	0	50
ಚೆನ್ನಗಿರಿ	..	0	30	ನಗರ	..	0	80
ಹೊನ್ನಾಳಿ	..	0	0	ತೀರ್ಥಹಳ್ಳಿ	..	0	94
ಶಿಕಾರಿಪುರ	..	0	10	ದಾವಣಗೆರೆ	..	0	4
ಸೊರಬ	..	0	0.				

ಫಸಲ್—ಕವಲೆ, ಕಾರ ಭತ್ತ, ಬಿಳೇಜೋಳ, ಹೆಸರು, ಇನ್ನು ಪೇರುವಾದವು, ಮತ್ತು ಯಳ್ಳೆ ದೈರುಗಳು ವಳ್ಳೀ ಸ್ಥಿತಿಯಲ್ಲಿ ಇವೆ. ಆದರೆ ದಾವಣಗೆರೆಯಲ್ಲಿ ಅವು ಚನ್ನಾಗಿಲ್ಲವು.

ಕಟಾವಾದ ಫಸಲ್‌ಗಳು—ರಾಗಿ, ಹುರಳಿ, ಕುರಾಸಾನಿ, ಭತ್ತ, ಅಡಿಕೆ, ಯಾಲಕ್ಕಿ, ಬಿಳಿ ಜೋಳ ಮತ್ತು ನವಣೆ.

ಜನಾರೋಗ್ಯ—ದಾವಣಗೆರೆ ಟೌನು ಇತರ ಸ್ಥಳಗಳಲ್ಲಿ ಜನಾರೋಗ್ಯವು ಚೆನ್ನಾಗಿದೆ. ಪರಂತು ದಾವಣಗೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವುಖಾಲೆಜ್‌ಲಾಬು ಸ್ವಲ್ಪಮಟ್ಟಿಗೆ ವ್ಯಾಪಿಸಿಯಿದೆ.

ಜಮ್ಮಿ—ಈ ಮೊಹಿಯಲ್ಲಿ 70—4—0 ಕಂದಾಯವುಳ್ಳ ಜಮ್ಮಿ ಸಾಗುವಳಿ ಬಗ್ಗೆ ತೆಗದುಕೊಳ್ಳಲ್ಪಟ್ಟಿದೆ.

ದಾರಣೆ—ಯಥಾಸ್ಥಿತವಾಗಿದೆ.

ಸೈಯದ್ ನಸೀರುದ್ದೀನ್,
ಛಾರ್ಜ್ ಪೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಮಳೆ—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಈ ಮೊಹಿಯೊಳಗೆ ಇವರವಿ ಕಂತೆ ಮಳೆ ಆಗಿಯಿದೆ:—

ತಾಲ್ಲೂಕುಗಳು.	ಇಂ.	ಸೆಂ.	ತಾಲ್ಲೂಕುಗಳು	ಇಂ.	ಸೆಂ.
ತರೀಕೆರೆ ..	0	65	ಹಾಸನ ..	0	20
ಕೊಪ್ಪ ..	0	40	ಮಂಜರಾಬಾದ್ ..	0	0
ಚಿಕ್ಕಮಗಳೂರು ..	0	66	ಬೇಲೂರು ..	0	20
ಕಡೂರು ..	1	50	ಅರಸೀಕೆರೆ ..	0	21¼
ಮೂಡಿಗೆರೆ ..	0	0	ಎಸಳ್ಳಿ ..	1	50

ಬೇರುವಾದ ಧಾನ್ಯಗಳು—ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಬ್ಬು, ಕಡೂರು ಮತ್ತು ಮಂಜರಾಬಾದ್ ತಾಲ್ಲೂಕುಗಳಲ್ಲಿ ವೈಶಾಖೀ ಭತ್ತ, ಹಾಸನ ತಾಲ್ಲೂಕಿನಲ್ಲಿ ಕಡಲೆ.

ಕಟುವಾದ ಫಸಲು—ತರೀಕೆರೆ, ಚಿಕ್ಕಮಗಳೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ಭತ್ತ, ರಾಗಿ, ತಮಾಂ ಮಲೆನಾಡು ತಾಲ್ಲೂಕುಗಳಲ್ಲಿ ಭತ್ತ ಮತ್ತು ಕಡೂರು ವ ಅರಸೀಕೆರೆ ತಾಲ್ಲೂಕುಗಳಲ್ಲಿ ಕಾಫಿ, ಅಡಿಕೆ, ರಾಗಿ, ಮೆಣಸಿನಕಾಯಿ ವಗೈರೆ.

ಫಸಲ್‌ಸ್ಥಿತಿ—ಪ್ರಾಯಶಃ ಚೆನ್ನಾಗಿ ಯಿದೆ.

ಕಾಲಸ್ಥಿತಿ—ಮಲೆನಾಡಿನಲ್ಲಿ ಚೆನ್ನಾಗಿಯಿದೆ. ಪರಂತು ಮೈದಾನದಲ್ಲಿ ಅಷ್ಟು ಚೆನ್ನಾಗಿಯಿಲ್ಲ.

ಜನಾರೋಗ್ಯ—ಸಮ್ಯಸ್ಥವಾಗಿದೆ. ಹಾಸನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜ್ವರ, ಛಳಿ, ತರೀಕೆರೆಯಲ್ಲಿ ಕೆಮ್ಮು ನಷ ವ್ಯಾಪಿಸಿ ಇದೆ.

ಕಾಲಸಡೆ—ಸಾಧಾರಣವಾಗಿ ವಳ್ಳಿ ಸ್ಥಿತಿಯಲ್ಲಿ ಯಿದೆ. ಹಾಸನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜ್ವರ ಮತ್ತು ಬಾಯಿರೋಗಗಳು ವ್ಯಾಪಿಸಿ ಇರುವಂತೆ ರಿಪೋರ್ಟಾಗಿರುತ್ತೆ. ಕಳೆದ ತಿಂಗಳಲ್ಲಿ 975 ಕಾಲ್ನಡಿಗೆಗಳೂ ಈ ತಿಂಗಳಲ್ಲಿ 762 ಕಾಲ್ನಡಿಗೆಗಳೂ ಹೋಗಿರುತ್ತವೆ.

ಜಮ್ಮಿ—ಸಾಗುವಳಿ ಬಗ್ಗೆ 1,011—8—0 ರೂಪಾಯಿ ಕಂದಾಯ ಬಾಳುವ ಜಮೀನು ತೆಗದುಕೊಳ್ಳಲ್ಪಟ್ಟಿದೆಂತೆ ರಿಪೋರ್ಟಾಗಿರುತ್ತೆ. ರಾಜೀನಾಮೆ ಯಾವದೂ ಇಲ್ಲವೆ.

ದಾರಣೆ—ಇತರ ಡಿಸ್ಟ್ರಿಕ್ಟುಗಳಿಗೆ ಜಿನಸಿಗಳು ವಿಶೇಷವಾಗಿ ಭರ್ತಿಯಾಗುವದರಿಂದ ದಾರಣೆ ಚಡಾಯಿಸುವ ಹಸಲು ಇದೆ.

ಮಹಮ್ಮದಬ್ಲೀ, ಕೆ. ಬಿ.,
ಆಕ್ಟಿ|| ಕಮ್ಮಿಷನರ್.

ಕೊಡಗು.

ನೋಟೀಸುಗಳು.

ತಾರೀಖು 4ನೇ ಡಿಸಂಬರ್ ಸ್ಯ 1884.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ, ಸ್ಯ 1885ನೇ ಜನವರೀ ತಾರೀಖು 1ರಿಂದ ಕೊಡಗು ಛಾರೆಸ್ಟುಗಳಲ್ಲಿ ಬಿದರುಗಳನ್ನು ವಂಶುಸಾವಿರಕ್ಕೆ 7—8—0 ವೇರೆ ಮಾರುತ್ತೇವೆ.

ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫೈಜರ್‌ವೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲಿ ಇರುವ ಛಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳ ತಕ್ಕದ್ದಿದೆ.